
‘ಸಾಹಿತ್ಯ ಸಂಬಂಧಿ ಲೇಖನಗಳು’ ಎಂದೇ ಅವರು ಸಂಕೋಚದಿಂದ ತಮ್ಮೆಲ್ಲ ಸಾಹಿತ್ಯಿಕ ಬರವಣಿಗೆಯ ಕುರಿತಾಗಿ ಕರೆದುಕೊಂಡುದು. ‘ಈ ಬರಹಗಳ ಆಳದಲ್ಲಿ ವ್ಯಾಪಕ ಅಧ್ಯಯನದಿಂದ ಸಂಪನ್ನಗೊಂಡ ವಿವೇಕಿಯೂ, ತಲಸ್ಪರ್ಶಿಯಾದ ವಿದ್ವಾಂಸನೂ ಇದ್ದಾರೆ. ಸಹೃದಯರನ್ನು ಸದಾ ಲಕ್ಷ್ಯದಲ್ಲಿರಿಸಿಕೊಂಡು ರೂಪುಗೊಳ್ಳುವ ಅವರ ವಿಮರ್ಶಾ ಬರಹಗಳಿಗೆ ಕನ್ನಡ ಸಾಹಿತ್ಯಲ್ಲಿ ಮಾದರಿಯೊಂದು ಇದ್ದೇ ಇದೆ. ಗೌರೀಶ ಕಾಯ್ಕಿಣಿ, ಎಲ್.ಎಸ್. ಶೇಷಗಿರಿರಾವ್, ಮಾಸ್ತಿ ಮುಂತಾದವರು ಪೋಷಿಸಿರುವ ವಿಮರ್ಶಾ ವಿವೇಕದ ವಿಧಾನವದು’ ಎಂದು ಚಿಂತಾಮಣಿ ಕೊಡ್ಲೆಕೆರೆ ಅವರು ಅಭಿಪ್ರಾಯಡುತ್ತಾರೆ. ಇಂಥ ಪ್ರಬಂಧಗಳ ಮೂರು ಕೃತಿಗಳು ‘ವಸ್ತು ವಿನ್ಯಾಸ’, ‘ಆಸ್ವಾದ’, ‘ಮಾರ್ದನಿ’.

ಅಂಕಣ ಬರಹಗಳದು ಅವರ ಬರವಣಿಗೆಯ ಮತ್ತೊಂದು ಮಜಲು. ‘ಸುಧಾ’ ವಾರಪತ್ರಿಕೆಯಲ್ಲಿ 2005ರಿಂದ 2015ರ ವರೆಗೆ ನಿರಂತರವಾಗಿ ‘ವಿಚಾರ ಲಹರಿ’ಗಾಗಿ ಬರೆದುದೊಂದು ದಾಖಲೆ. ಅವರ ನಿರಂತರದ ಈ ಬರವಣಿಗೆಯ ಕೈಂಕರ್ಯ ಈಗ ‘ವ್ಯವಧಾನ’, ‘ಅಂತರ್ಯಾತ್ರೆ’ ಎಂದು ಎರಡು ಹೆಬ್ಬೊತ್ತಿಗೆಯಲ್ಲಿ ಅಚ್ಚಾಗಿದೆ. ಅವರ ಕಾವ್ಯ ಪ್ರೀತಿ ‘ಮಯೂರ’ ಮಾಸಿಕದಲ್ಲಿ ಅವರಿಗಿಷ್ಟವಾದ ಕವಿತೆಯ ಕುರಿತೇ ಒಂದೊಂದು ಲೇಖನ ಬರೆಯಲು ಪ್ರೇರೇಪಿಸಿತ್ತು.

ಮಕ್ಕಳ ಕವಿ ಅವರೊಳಗಿನ ಬಲು ಆಪ್ತ ಜೀವಿ. ಕನ್ನಡದಲ್ಲಿ ಹೊಸಗಾಲದ ಮಕ್ಕಳ ಸಾಹಿತ್ಯ ಹೊಸ ಹೊಸ ಸಾಧ್ಯತೆಗಳಿಗೆ ತುಡಿಯುತ್ತ ಬರುತ್ತಿದ್ದಾಗಲೇ ತೊಡಗಿಕೊಂಡ ಉಡುಪರು, ತಮ್ಮದೇ ಆದ ಮಕ್ಕಳಲೋಕವನ್ನ ಅನಾವರಣಗೊಳಿಸಿದರು. ಅವರದೇನಿದ್ದರೂ ಪುಟಾಣಿಗಳ ಲೋಕವೇ. ಅದು ಮುಗ್ಧವಾದುದಾಗಿ ನಮ್ಮನ್ನ ಸೆಳೆಯುವುದರ ಜೊತೆಗೆ ತುಂಟತನ, ಕೀಟಲೆಯಿಂದ ದಿಗಿಲುಗೊಳಿಸುವಂಥದು. ಅವರ ಎಲ್ಲ ರಚನೆಗಳಲ್ಲೂ ರಂಜನೀಯ ಹಾಸ್ಯ ಸದಾ ಕಾದುಕೊಂಡಿರುವುದನ್ನ ಮಕ್ಕಳು ಗುರುತಿಸುತ್ತಾರೆ, ಮಕ್ಕಳ ಸಾಹಿತ್ಯದ ಅಧ್ಯಯನಿಗಳು ಗುರುತಿಸುತ್ತಾರೆ. ಆದಷ್ಟೂ ಅದು ನಗರ ವಾತಾವರಣದಲ್ಲಿನ (ನಿವೃತ್ತಿಯ ನಂತರ ಉಡುಪರು ನೆಲೆಸಿದುದು ಬೆಂಗಳೂರಿನಲ್ಲಿ) ಮಕ್ಕಳನ್ನೇ ಎದುರಿಗೆ ಕಾಣುತ್ತ ತೊಡಗಿಕೊಂಡುದು. ಮಕ್ಕಳ ದಿನನಿತ್ಯದ ಪಡಿಪಾಟಲು, ಬವಣೆಗಳೆಲ್ಲವನ್ನ ಅವರು ಇರಿಸಿಕೊಂಡೇ ಅವರನ್ನ ರಂಜಿಸುವ, ಆಹ್ಲಾದಗೊಳಿಸುವ, ಚುರುಕು ಚೈತನ್ಯಗೊಳಿಸುವ ರಚನೆಗಳ ಕಡೆಗೆ ವಾಲಿದುದು ಎಂದು ಕಾಣುತ್ತದೆ.




‘ಯಾಕಪ್ಪಾ ಮಗು, ನಿಂತಿದ್ದೀಯಾ
ಬೆರಳನು ಚೀಪುತ್ತಾ ?’
‘ಮೋಡದ ಊರಿಗೆ ದಾರಿ ಯಾವುದು,
ತಾತ, ನಿಮಗೆ ಗೊತ್ತಾ ?’

‘ಯಾಕಪ್ಪಾ ಮಗು, ಸುಮ್ಮನೆ ಕುಳಿತೆ
ನೋಡುತ ಬಾನತ್ತ?’
‘ತಾತ, ಸುಮ್ಮಗಿರಿ, ಕುಳಿತಿದ್ದೇನೆ
ಚುಕ್ಕೆಗಳೆಣಿಸುತ್ತಾ?’